**ಎಂ ವಿ ಸಿ 296/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 07.05.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ ಎಂ ವಕೀಲರಿಂದಃ**

ಅಪರಾಧ ಸಂಖ್ಯೆ 269/2023 ರಲ್ಲಿನ ಅಂತಿಮ ವರದಿ, ಪ್ರಥಮ ವರ್ತಮಾನ ವರದಿ, ದೂರು, ಸ್ಥಳ ಮಹಜರು, ನೋಟೀಸು, ಛಾಯಾಚಿತ್ರಗಳ ಎರಡು ಪುಟಗಳು, ಅಮಾನತ್ತು ಪಂಚನಾಮೆ, ಎರಡು ನೋಟೀಸುಗಳು, ಕಲಂ 133 ರಡಿ ಇಂಡಿಮಿನಿಟಿ ಬಾಂಡ್, ಗಾಯದ ಪ್ರಮಾಣಪತ್ರ, ಎಂ ಎಲ್ ಸಿ ವಹಿಯ 2 ಉತ್ತಾರುಗಳು, ಮೋಟಾರು ವಾಹನ ಅಪಘಾತ ವರದಿ, ಗಾಯಾಳು ಹೇಳಿಕೆ, ಸಾಕ್ಷಿದಾರರ ಹೇಳಿಕೆ ಇವಗಳ ದೃಢೀಕೃತ ನಕಲುಗಳು, ಎರಡು ಡಿಸ್ ಚಾರ್ಜ ಸಮ್ಮರಿಗಳು, 4 ವೈದ್ಯಕೀಯ ಪರೀಕ್ಷಾ ವರದಿಗಳು, 32 ಮೆಡಿಕಲ್ ಬಿಲ್ಲುಗಳು, 2 ಎಕ್ಸರೇಗಳು ಮತ್ತು 7 ಸಿ ಟಿ ಫಿಲಂಗಳ ನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 5 ರಿಂದ 68 ಎಂದು ಗುರುತಿಸಲಾಯಿತು.

2 ಆಧಾರ್ ಕಾರ್ಡ, ಒಂದು ಪಾನ್ ಕಾರ್ಡ ಹಾಗೂ ಒಂದು ಬ್ಯಾಂಕ್ ಪಾಸ್ ಪುಸ್ತಕದ ಮೂಲ ದಾಖಲಾತಿಗಳು ಹಾಗೂ ಅವುಗಳ ನೋಟರೀಕೃತ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದೇನೆ. ಮೂಲ ದಾಖಲೆಗಳನ್ನು ನಕಲುಗಳೊಂದಿಗೆ ತಾಳೆ ಮಾಡಿ ಮೂಲ ದಾಖಲೆಗಳನ್ನು ಹಿಂತಿರುಗಿಸಿ ನಕಲುಗಳನ್ನು ನಿಶಾನೆ ಪಿ 69 ರಿಂದ 72 ಎಂದು ನಿಶಾನಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಇ ಎಲ್ ವಕೀಲರ ಪರವಾಗಿ ಶ್ರೀ ಕೆ ಎಂ ವಕೀಲರಿಂದಃ**

ನಾವು ರಸ್ತೆಯಲ್ಲಿ ಪಾಂಡವಪುರಕ್ಕೆ ಹೋಗುವ ಭಾಗದ ಕಡೆ ನಿಂತಿದ್ದೆವು. ಸದರಿ ರಸ್ತೆಯು ಪಾಂಡವಪುರ – ಕೆ ಆರ್ ಎಸ್ ಮುಖ್ಯ ರಸ್ತೆಯಾಗಿದ್ದು ಅದರ ಅಗಲ ಸುಮಾರು 100 ಅಡಿ

ಇದೆ ಎಂದರೆ ಸರಿ. ಸದರಿ ರಸ್ತೆಯ ಬದಿ ಫುಟ್ ಪಾತ್ ಇದೆ ಎಂದರೆ ಸರಿ. ನಾವು ನಿಂತಿದ್ದ ಜಾಗವು ಹಾರೋಹಳ್ಳಿ ಊರಿನ ಒಳಗೆ ಹೋಗುವ ಜಾಗ ಎಂದರೆ ರಸ್ತೆಯಿಂದ ಒಂದು ಸ್ವಲ್ಪ ಮುಂದೆ ನಿಂತಿದ್ದೆವು. ನಾವು ನಿಂತಿದ್ದ ರಸ್ತೆಯ ಅಜುಬಾಜು ಹೋಟೇಲ್ ಅಂಗಡಿಗಳು ಇವೆ ಎಂದರೆ ಸರಿ. ನಾವು ನಿಂತಿದ್ದ ಜಾಗವು ಅಂದರೆ ಘಟನಾ ಸ್ಥಳವು ಎಲೆಕೆರೆ ಕಡೆಯಿಂದ ಬರುವ ಹೆಚ್ಚು ತಿರುವಿನಿಂದ ಕೂಡಿದ ರಸ್ತೆ ಎಂದರೆ ಸರಿ. ಅಪಘಾತಪಡಿಸಿದ ವಾಹನದ ಜೊತೆಯಲ್ಲಿ ಬೇರೆ ಯಾವುದೇ ವಾಹನ ಬರುತ್ತಿರಲಿಲ್ಲ. ಸದರಿ ವಾಹನವು ವೇಗವಾಗಿ ಬರುತ್ತಿತ್ತು. ಸದರಿ ರಸ್ತೆಯಲ್ಲಿ ರಸ್ತೆ ವಿಭಜಕ ಇದೆ ಎಂದರೆ ಸರಿ. ರಸ್ತೆ ವಿಭಜಕ ಇರುವ ಕಾರಣ ಜನರು ರಸ್ತೆಯನ್ನು ಒಂದು ಬದಿಯಿಂದ ಮತ್ತೊಂದು ಬದಿಗೆ ದಾಟಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ರಸ್ತೆ ದಾಟಲು ರಸ್ತೆಯ ವಿಭಜಕವು ಓಪನ್ ಇರುವ ಕಾರಣ ಅವರು ತಮ್ಮ ಹೊಲಕ್ಕೆ ಹೋಗಲು ನಿಂತಿದ್ದರು ಎಂದರೆ ಸರಿ. ನಾವು ನಿಂತಿದ್ದಾಗ ವಾಹನವು ಅಪಘಾತಪಡಿಸಿತು. ನಾವು ರಸ್ತೆಯನ್ನು ದಾಟುತ್ತಿರಲಿಲ್ಲ. ತಿರುವು ಇರುವ ಕಡೆ ವಾಹನಗಳು ಸಾಮಾನ್ಯವಾಗಿ ಬಲಭಾಗದಲ್ಲಿ ಚಲಿಸುತ್ತವೆ ಎಂದರೆ ಸದರಿ ವಾಹನವು ನಾವು ನಿಂತಿದ್ದ ಎಡಭಾಗದಲ್ಲಿ ಬಂದು ನನ್ನ ಮಗನಿಗೆ ಡಿಕ್ಕಿಪಡಿಸಿತು. ಅಪಘಾತದಲ್ಲಿ ನನ್ನ ಮಗನಿಗೆ ಮಾತ್ರ ಏಟು ಆಯಿತು. ಅಕ್ಕಪಕ್ಕದ ಅಂಗಡಿಗಳಿಗೆ ಯಾವುದೇ ತೊಂದರೆ ಆಗಲಿಲ್ಲ.

ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆ ನನಗೆ ಗೊತ್ತಿದೆ. ನೋಂದಣಿ ಸಂಖ್ಯೆಯನ್ನು ನಾನೇ ನೋಡಿದ್ದೆ. ಪೊಲೀಸರಿಗೆ ಅದೇ ದಿನ ದೂರು ನೀಡಲಿಲ್ಲ. ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರಿಗೆ ಅಪಘಾತಪಡಿಸಿದ ವಾಹನದ ವಿವರ ಮತ್ತು ನೋಂದಣಿ ಸಂಖ್ಯೆಯನ್ನು ನಾನು ತಿಳಿಸಲಿಲ್ಲ. ನಾವು ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯವರು ಪೊಲೀಸರಿಗೆ ಪೋನಿನ ಮೂಲಕ ಅಪಘಾತದ ಬಗ್ಗೆ ಮಾಹಿತಿ ನೀಡಿದರು. ಆದರೆ ಪೊಲೀಸರು ಆಸ್ಪತ್ರೆಗೆ ಬರಲಿಲ್ಲ. ಆಸ್ಪತ್ರೆಯ ವೈದ್ಯರು ಪೊಲೀಸರಿಗೆ ಮಾಹಿತಿ ನೀಡಿದರೂ ಸಹ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದುಕೊಳ್ಳಲಿಲ್ಲ ಎಂದು ನನ್ನ ದೂರಿನಲ್ಲಿ ನಾನು ಹೇಳಿಲ್ಲ. ಅಪಘಾತ ಆದ ಸ್ಥಳದ ಬದಿ ತೆರೆದ ಒಳಚರಂಡಿ ಇದೆ ಎಂದರೆ

ಸರಿ. ಯಾವುದೇ ಅಪಘಾತ ಆದರೆ ಅಪಘಾತಕ್ಕೆ ಈಡಾದ ವ್ಯಕ್ತಿ ಅಥವಾ ವಾಹನ ಆ ಒಳಚರಂಡಿಗೆ ಬೀಳುವ ಸಾಧ್ಯತೆ ಇದೆ ಎಂದರೆ ಸರಿ, ಆದರೆ ವಾಹನಗಳು ಆ ಒಳಚರಂಡಿ ಒಳಗೆ ಇಳಿಯಲು ಆಗುವುದಿಲ್ಲ. ನನ್ನ ಮಗನಿಗೆ ಅಪಘಾತಪಡಿಸಿದ ವಾಹನಕ್ಕೆ ಯಾವುದೇ ಜಖಂ ಆಗಲಿಲ್ಲ. ಅಪಘಾತ ನಡೆದ ಸ್ಥಳದ ಮುಂಭಾಗ ಒಂದು ಅಂಗಡಿ ಇದೆ ಎಂದರೆ ಸರಿ. ಆ ಅಂಗಡಿಗೆ ಏನು ತೊಂದರೆ ಆಗಲಿಲ್ಲ ಎಂದರೆ ಸರಿ. ನಾನು ನೋಡಿದ ಪ್ರಕಾರ ಆ ವಾಹನಕ್ಕೆ ಯಾವುದೇ  ಒಂದು ಸಣ್ಣ ಜಖಂ ಸಹ ಆಗಿಲ್ಲ. ಪೊಲೀಸರು ತಯಾರಿಸಿರುವ ವಾಹನ ಅಮಾನತ್ತು ಮಹಜರಿನಲ್ಲಿ ಅಪಘಾತಪಡಿಸಿದ ವಾಹನದ ಮುಂಭಾಗದ ಬಂಪರ್ ನ ಎಡಭಾಗ ಜಖಂ ಆಗಿದೆ ಎಂದು ನಮೂದು ಮಾಡಿದ್ದಾರೆ  ಎಂದರೆ, ನಾನು ನನ್ನ ಮಗನ ಚಿಂತೆಯಲ್ಲಿ ಇದ್ದ ಕಾರಣ ಅದನ್ನು ನಾನು ಗಮನಿಸಲಿಲ್ಲ.

ಅಪಘಾತ ಕಾರಣದಿಂದ ನನ್ನ ಮಗನಿಗೆ ಲಿವರ್ ಡ್ಯಾಮೇಜ್ ಆಗಿತ್ತು, ಬಲಭಾಗದ ತೋಳಿಗೆ ಮತ್ತು ಹೊಟ್ಟೆಗೆ ತೀವ್ರತರಹದ ಗಾಯವಾಗಿತ್ತು. ವಾಹನವು ಯಾವುದೇ ವ್ಯಕ್ತಿಗೆ ಡಿಕ್ಕಿಪಡಿಸಿದಾಗ ಮೊದಲು ಆ ವ್ಯಕ್ತಿಯ ಸೊಂಟದಿಂದ ಕೆಳಭಾಗದ ಅಂಗಾಂಗಳಿಗೆ ಪೆಟ್ಟಾಗುತ್ತದೆ ಎಂದರೆ ನನ್ನ ಮಗನು ಆ ವಾಹನದ ಅಪಘಾತದಿಂದ ಮೋರಿಗೆ ಬಿದ್ದು ಅವನ ಕಾಲಿಗೆ, ಹೊಟ್ಟೆಗೆ ಮತ್ತು ತೋಳಿಗೆ ಏಟು ಆಗಿತ್ತು. ನಾನು ನನ್ನ ಮಗನನ್ನುಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದರು ನನ್ನ ಮಗನಕಾಲಿಗೆ ಏಟು ಆಗಿದೆ ಎಂದು ನಮೂದು ಮಾಡಿಲ್ಲ ಎಂದರೆ ನನ್ನ ಮಗನ ಕಾಲಿಗೆ ಅಷ್ಟೇನೂ ಹೆಚ್ಚಿನ ಏಟು ಆಗದೆ ಸಣ್ಣ ಪುಟ್ಟ ಏಟು ಆಗಿದ್ದ ಕಾರಣ ನನ್ನ ಮಗನ ಕಾಲಿನ ಗಾಯವನ್ನು ವೈದ್ಯರು ನಮೂದು ಮಾಡಿಲ್ಲ. ನಾನು ಹಾಜರುಪಡಿಸಿರುವ ಸಿ ಟಿ ಫಿಲಂಗಳು ನನ್ನ ಮಗನ ತಲೆಗೆ ಸಂಬಂಧಿಸಿವೆ ಎಂದರೆ ಸರಿ. ನನ್ನ ಮಗನ ತಲೆಗೆ ಯಾವುದೇ ಏಟು ಆಗಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಎಕ್ಸರೇಗಳು ನನ್ನ ಮಗನ ಸೊಂಟದ ಭಾಗಕ್ಕೆ ಸಂಬಂಧಿಸಿವೆ ಎಂದರೆ ಸರಿ. ನನ್ನ ಮಗನ ಸೊಂಟದ ಯಾವುದೇ ಏಟು ಆಗಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಎಕ್ಸರೇ ಮತ್ತು ಸಿ ಟಿ ಫಿಲಂಗಳು ಯಾವುದೇ  ಅಪಘಾತದಲ್ಲಿ ಆಗಿರುವ ಗಾಯಗಳಿಗೆ ಸಂಬಂಧಿಸಿದ

ಎಕ್ಸರೇ ಹಾಗೂ ಸಿ ಟಿ ಫಿಲಂಗಳು ಆಗಿರದೆ ಅವುಗಳನ್ನು ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಚಿಕ್ಕ ಮಕ್ಕಳ ತೋಳಿಗೆ ಏಟು ಆದರೆ ಯಾವುದೇ ಶಸ್ತ್ರ ಚಿಕಿತ್ಸೆ ನಡೆಸದೆ ಪಟ್ಟಿ ಮಾಡುವ ಮೂಲಕ ಅದನ್ನು ಸರಿಪಡಿಸುತ್ತಾರೆ ಎಂದರೆ ನನ್ನ ಮಗನ ತೋಳಿಗೆ ಯಾವುದೇ ಫ್ರಾಕ್ಚರ್ ಆಗದೆ ಇದ್ದ ಕಾರಣ ಪಿಒಪಿ ಅಳವಡಿಸಿ ಸರಿಪಡಿಸಿದ್ದಾರ. ಪಿಒಪಿ ಎಂದರೆ ಶಸ್ತ್ರ ಚಿಕಿತ್ಸೆ ಎಂದು ಅರ್ಥ ಅಲ್ಲ ಎಂದರೆ ಸರಿ. ನನ್ನ ಮಗನ ಮೂಳೆಗಳ ಚಿಕಿತ್ಸೆಗೆ ಪಾಂಡವಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿದ್ದರು ಎಂದರೆ ಅವರೇ ಜಿಲ್ಲಾಸ್ಪತ್ರೆಗೆ ಕಳುಹಿಸಿಕೊಟ್ಟರು. ನನ್ನ ಮಗನು ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಾನು ನನ್ನ ಮಗನನ್ನು ಅಲ್ಲಿ ದಾಖಲು ಮಾಡಲಿಲ್ಲ. ಮೈಸೂರು ಜಿಲ್ಲಾಸ್ಪತ್ರೆಗೆ ನನ್ನ ಮಗನನ್ನು ಕರೆದುಕೊಂಡು ಹೋಗುವಂತೆ ಹೇಳಿ ಪಾಂಡವಪುರ ಸರ್ಕಾರಿ ಆಸ್ಪತ್ರೆ ವೈದ್ಯರು ಯಾವುದೇ ಪತ್ರವನ್ನು ನೀಡಲಿಲ್ಲ, ಮೌಖಿಕವಾಗಿ ಹೇಳಿದರು. ಪಿ ಒ ಪಿ ಹಾಕುವುದಕ್ಕೆ ಕೇವಲ 2 ರಿಂದ 3 ಸಾವಿರ ತಗುಲುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ತರಹದ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡುತ್ತಾರೆ ಎಂದರೆ ನನ್ನ ಮಗನು ರಕ್ತ ವಾಂತಿ ಮಾಡಿಕೊಂಡ ಕಾರಣ ಆಸ್ಪತ್ರೆಯವರು ಅಂಬೂಲೆನ್ಸ್ ಮೂಲಕ ಸುಯೋಗ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನನ್ನ ಮಗ ರಕ್ತ ವಾಂತಿ ಮಾಡಿಕೊಂಡ ಸಂಬಂಧ ವೈದ್ಯರು ಚಿಕಿತ್ಸೆ ನೀಡಿರಬಹುದು. ಡಿಸ್ ಚಾರ್ಜ ಸಮ್ಮರಿಯಲ್ಲಿ ರಕ್ತ ವಾಂತಿ ಮಾಡಿಕೊಂಡ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಮಗನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುವಂತ ಯಾವುದೇ ರೀತಿಯ ತೀವ್ರತರಹವಾದ ಗಾಯಗಳು ಆಗದೆ ಇದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸುಮಾರು 20 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದು ರೂ. 4,00,000/- ಹಚ್ಚಿನ ಹಣ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನು ಈಗ ಚೆನ್ನಾಗಿ

ಓಡಾಡಿಕೊಂಡಿದ್ದಾನೆ ಎಂದರೆ  ಸರಿಯಲ್ಲ. ನನ್ನ ಮಗನಿಗೆ ಪುನಃ ಶಸ್ತ್ರ ಚಿಕಿತ್ಸೆ ನಡೆಸಬೇಕೆಂದು ವೈದ್ಯರು ಹೇಳಿದ್ದಾರೆ. ತಲೆಗೆ ಮತ್ತು ಹೊಟ್ಟೆಗೆ ಶಸ್ತ್ರ ಚಿಕಿತ್ಸೆ ನಡೆಸಬೇಕೆಂದು ಹೇಳಿದ್ದಾರೆ. ನನ್ನ ಮಗನು ಈಗ ಗುಣಮುಖನಾಗಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ  ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**